ಕವಿತೆ



ಸದಾಶಿವ ಸೊರಟೂರು

ಕಲೆ: ರಾಜೇಂದ್ರ ಕೇದಿಗೆ



# ಶಬ್ದಕೋಶ

ನಾನೊಂದು ಹೊಸ ಶಬ್ದಕೋಶ
ಕೊಂಡು ತಂದೆ
ಬೆಲೆ ಚಿಕ್ಕದು ಗಾತ್ರ ದೊಡ್ಡದು
ದಪ್ಪನೇ ಹೊರಪುಟ
ಶಿಸ್ತಿನಿಂದ ಕೂತ ಪದಗಳು ಒಳಗೆ
ಶಬ್ದಕೋಶವನ್ನು ಕಥೆಯಂತೆ
ಓದಬಹುದೇ?
ನಕ್ಕೆ...
ಯಾವುದೊ ಅರ್ಥ ಹೊಳೆಯದಿದ್ದಾಗ
ಮಾತ್ರ ತೆಗೆದು ನೋಡಬೇಕು
ಅಂದಿದ್ದರು ಯಾರೊ!

ನಾನು ನನ್ನ ಮಗನಿಗೂ ಅದೇ ಹೇಳಿದೆ
ಅವನು ಅವನ ಮಗನಿಗೆ
ಮತ್ತೆ ಅವನ ಮಗ
ಅವನ ಮಗನಿಗೂ ಇರಬಹುದು...

ಎಲ್ಲಾ ಪದಗಳು ಹೇಗೆ ಸಂಸಾರ
ಮಾಡಿಕೊಂಡಿವೆ ಅಲ್ಲಿ
ಬಹುಶಃ ಯಾರಿಗೂ ಗೊತ್ತಿಲ್ಲ..
ಗುರಾಣಿ ಮತ್ತು ಗುಲಾಬಿ
ಅನ್ನ ಮತ್ತು ಅವಮಾನ
ಮಡಿ ಮತ್ತು ಮಡ್ಡಿ
ಎಲ್ಲವೂ ಒಂದೇ ಓಣಿಯಲ್ಲಿವೆ
ಪದ, ಇನ್ನೊಂದು ಪದ
ನೋಡಿ ನಗುವುದಿಲ್ಲ
ಒಂದು ಮತ್ತೊಂದನ್ನು ದೂರ ಇಡುವುದಿಲ್ಲ
ದುಡಿಸಿಕೊಳ್ಳುವುದಿಲ್ಲ
ಮುಟ್ಟಿಸಿಕೊಳ್ಳದೆ ಇರುವುದಿಲ್ಲ
ಹಸಿದಂತೂ ಸಾಯುವುದೇ ಇಲ್ಲ

ನಮಗಿದು ಗೊತ್ತಾಗುವುದಿಲ್ಲ
ನಾವು ಒಂದೊಂದು ಪದಗಳನ್ನು
ಆಚೆಗೆ ಎಳೆದು ನೋಡಿದ್ದೇವೆ ಬೇಕಾದಾಗ
ಆಯುಧಗಳಂತೆ;
ಬಳಸುತ್ತೇವೆ, ಮಸೆಯುತ್ತೇವೆ
ಝಳಪಿಸುತ್ತೇವೆ...
ಶಬ್ದಕೋಶಗಳು ಹತಾರ ಕೋಶಗಳಾಗುತ್ತವೆ
ಮಾತುಗಳು ಮಾರಕಾಸ್ತ್ರಗಳು
ನನ್ನ ಎದೆ ಮೇಲಿನ ಗಾಯಗಳನು
ನೋಡಿಕೊಂಡಾಗಲೆಲ್ಲಾ ಅನಿಸುತ್ತದೆ
ಓದಬೇಕಿತ್ತು ನಾನು
ಶಬ್ದಕೋಶವನ್ನು
ಒಂದು ಕವಿತೆಯಂತೆ
ಇಲ್ಲವೇ ಪ್ರೇಮಪತ್ರದಂತೆ
ಕನಿಷ್ಠ ವಿರಹ ಗೀತೆಯಂತಾದರೂ
ಮತ್ತು
ಮಗನಿಗೂ ಕಲಿಸಬೇಕಿತ್ತು
'ಮಗು, ಪದವನ್ನು ದೀಪದಂತೆ ಹಚ್ಚಿಡು
ಹೊಸಲಿಗೆ'